ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಧಾರವಾಡ ಪಟ್ಟಣದಲ್ಲಿ ಪಡಿತರ ಚೀಟಿಯ ವಿತರಣೆ ಬಗ್ಗೆ

470. ಶ್ರೀ ಆರ್. ಮೋರೆ (ಧಾರವಾಡ ನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಪಟ್ಟಣ ಪ್ರದೇಶಗಳಲ್ಲಿ ಕಳೆದ ಏಳೆಂಟು ವರ್ಷಗಳಿಂದ ಕಾರ್ಡು ರಹಿತ ಸಾವಿರಾರು ಕುಟುಂಬಗಳಿಗೆ ನೂತನ ಪಡಿತರ ಕಾರ್ಡುಗಳ ವಿತರಣೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೊಸ ಪಡಿತರ ಕಾರ್ಡುಗಳನ್ನು ಯಾವಾಗ ನೀಡಲಾಗುವುದು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಧಾರವಾಡ ಪಟ್ಟಣದಲ್ಲಿ 9110 ಕುಟುಂಬಗಳಿಗೆ ಪಡಿತರ ಚೀಟಿ ಇಲ್ಲದಿರುವುದಾಗಿ ವರದಿಯಾಗಿದೆ.

ಆ) ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳು 10,000 ಖಾಲಿ ಇರುವ ಪಡಿತರ ಚೀಟಿಗಳನ್ನು ಕೋರಿದ್ದು, ಧಾರವಾಡ ಜಿಲ್ಲೆಯ ಸರ್ಕಾರಿ ಮುದ್ರಣಾಲಯದಲ್ಲಿ ಈಗಾಗಲೇ ವಿತರಣೆಗೆ ಇರುವ 8,000 ಪಡಿತರ ಚೀಟಿಗಳನ್ನು ಎತ್ತುವಳಿ ಮಾಡಲು ತಿಳಿಸಲಾಗಿರುತ್ತದೆ.

ಅಫ್ಜಲ್‌ಪುರದಲ್ಲಿ ಜನರಲ್ ಆಸ್ಪತ್ರೆಯ ನಿರ್ಮಾಣ ಮಾಡುವ ಬಗ್ಗೆ

529. ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫ್ಜಲ್‌ಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಅಫ್ಜಲ್‌ಪುರ್ ಕ್ಷೇತ್ರದಲ್ಲಿನ ಸಾರ್ವಜನಿಕ ಆಸ್ಪತ್ರೆ, ಯಾವ ವರ್ಷದಲ್ಲಿ ಮಂಜೂರಾಗಿರುತ್ತದೆ?

2) ಮಂಜೂರಾಗಿದ್ದಲ್ಲಿ, ಅದು ಪೂರ್ತಿ ಆಗದೆ ಇರಲು ಕಾರಣಗಳೇನು?

3) ಇಲ್ಲಿಯವರೆಗೆ ಕಟ್ಟಡಕ್ಕೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು):–

1) 1980.

2) ಹಣದ ಕೊರತೆ ಇರುವುದರಿಂದ.

3) ರೂ. 9.78 ಲಕ್ಷಗಳು.

ರಾಜ್ಯದಲ್ಲಿ ಖಾಲಿಯಿರುವ ವೈದ್ಯಾಧಿಕಾರಿ ಹುದ್ದೆಗಳ ಬಗ್ಗೆ

483. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಖಾಲಿ ಇರುವ ಡಾಕ್ಟರುಗಳ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಡಾಕ್ಟರುಗಳ ನೇಮಕಾತಿಯನ್ನು ಮಾಡಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು?